# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕರಾವಳಿ ತೀರದಲ್ಲಿ ಮೀನಿನ ಸಂತತಿಗೆ ಪೂರಕವಾದ ಪಚ್ಚಿಲೆ (ಗ್ರೀನ್ ಮಸಲ್) ತೆಗೆಯುವ ಕಾರ್ಯವನ್ನು ನಿಷೇಧಿಸುವಿಕೆ.

ಓದಲಾಗಿದೆ:- ಪತ್ರ ಸಂಖ್ಯೆ:ಎಫ್‌ಎಆರ್/1/2009-10 ದಿನಾಂಕ:04-05-2009 ಮತ್ತು ದಿನಾಂಕ:17-08-2009.

******

**ಪ್ರಸ್ತಾವನೆ:**

ಮೀನುಗಾರಿಕೆ ನಿರ್ದೇಶಕರ ಮೇಲೆ ಓದಲಾದ ಪತ್ರಗಳಲ್ಲಿ, ಕೇರಳ ರಾಜ್ಯದ ಉದ್ದಿಮೆದಾರರು ಈ ಹಿಂದೆ 30 ರಿಂದ 40 ನುರಿತ ಈಜುಗಾರರು ನಾಡದೋಣಿಗಳನ್ನು ಬಳಸಿ, ಸಮುದ್ರ ತೀರ ಪ್ರದೇಶಗಳಲ್ಲಿರುವ ಬಂಡೆಗಳಿಂದ ಪಚ್ಚಿಲೆಗಳನ್ನು ಹರಿತವಾದ ಆಯುಧಗಳಿಂದ ತೆಗೆದು ಕೇರಳ ರಾಜ್ಯಕ್ಕೆ ಸಾಗಿಸಿ ಮಾರಾಟ ಮಾಡುತ್ತಿದ್ದು, ಅದರಂತೆ ಸೋಮೇಶ್ವರ, ಉಚ್ಚಿಲ ಸಮುದ್ರ ತೀರದಲ್ಲಿ ತುಂಬಾ ಬಂಡೆಗಳಿದ್ದು, ಈ ಬಂಡೆ ಪ್ರದೇಶವು ವಿವಿಧ ಜಾತಿಯ ಮೀನುಗಾರಿಕೆ ಆಹಾರ ಮತ್ತು ಸಂತಾನೋತ್ಪತ್ತಿಗೆ ಅತ್ಯಂತ ತಾಣವಾಗಿದ್ದು, ಇಂತಹ ಬಂಡೆಗಳಿಂದ ಪಚ್ಚಿಲೆಗಳನ್ನು ಅಗಾಧ ಪ್ರಮಾಣದಲ್ಲಿ ತೆಗೆಯುವುದರಿಂದ ನೈಸರ್ಗಿಕ ಫಲವತ್ತತೆ ಕಡಿಮೆಯಾಗಿ ಮೀನಿನ ಕ್ಷಾಮಕ್ಕೆ ಕಾರಣವಾಗಬಹುದೆಂದು, ಇದನ್ನು ಮೀನುಗಾರಿಕಾ ಕಾಲೇಜಿನ ತಾಂತ್ರಿಕ ವರದಿಯಲ್ಲಿ ದೃಢೀಕರಿಸಿರುವುದಲ್ಲದೆ. ಇದರಿಂದ ಸಾಂಪ್ರದಾಯಿಕ ಮೀನುಗಾರಿಕೆ ನಡೆಸಿಕೊಂಡು ಬರುವಂತಹ ಮೀನುಗಾರರ ಜೀವನೋಪಾಯಕ್ಕಾಗಿ ತೊಂದರೆ ನೀಡಿದಂತಾಗುವುದರಿಂದ ಹಾಗೂ ಸ್ಥಳೀಯವಾಗಿ ಗಲಭೆಗೆ ಅವಕಾಶವಾಗುವುದರಿಂದ, ಪಚ್ಚಿಲೆ ಸಂಗ್ರಹವನ್ನು ಸಂಪೂರ್ಣವಾಗಿ ನಿಷೇಧಿಸುವ ಬಗ್ಗೆ ಸೂಕ್ತ ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಮೀನುಗಾರಿಕೆ ನಿರ್ದೇಶಕರ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ ಸಂಖ್ಯೆ:ಪಸಂಮೀ 113 ಮೀಇಇ 2009, ಬೆಂಗಳೂರು ದಿನಾಂಕ:01-10-2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರಾವಳಿ ತೀರ ಪ್ರದೇಶದಲ್ಲಿ ಮೀನಿನ ಸಂತತಿಗೆ ಪೂರಕವಾದ ಬಂಡೆಗಳಿಂದ ಪಚ್ಚಿಲೆ (ಗ್ರೀನ್ ಮಸಲ್) ತೆಗೆಯುವುದರಿಂದ ನೈಸರ್ಗಿಕ ಫಲವತ್ತತೆ ಕಡಿಮೆಯಾಗಿ ಮೀನಿನ ಕ್ಷಾಮಕ್ಕೆ ಕಾರಣವಾಗುವುದರಿಂದ ಪಚ್ಚಿಲೆ (ಗ್ರೀನ್ ಮಸಲ್) ತೆಗೆಯುವ ಕಾರ್ಯವನ್ನು ಸರ್ಕಾರ ಸಂಪೂರ್ಣವಾಗಿ ನಿಷೇಧಿಸಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಎಂ.ರಾಜಣ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ(ಮೀ)

ಇವರಿಗೆ:

1) ಮಹಾಲೇಖಪಾಲರು (ಎ ಮತ್ತು ಇ)(ಆಡಿಟ್ 1 ಮತ್ತು 2), ಕರ್ನಾಟಕ, ಬೆಂಗಳೂರು.
2) ಮೀನುಗಾರಿಕೆ ನಿರ್ದೇಶಕರು, ಬೆಂಗಳೂರು.
3) ~~ಮೀನುಗಾರಿಕೆ ಉಪ ನಿರ್ದೇಶಕರು, ಮಂಗಳೂರು.~~